ಅಧ್ಯಕ್ಷರು : ನೀವು ಹೇಳಿದ ಎಲ್ಲಾ ಸಲಹೆಗಳನ್ನು ಅಳವಡಿಸಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ.

ಇತರೇ ರಾಜ್ಯಗಳಲ್ಲಿರುವ ಕನ್ನಡ ಶಾಲೆಗಳ ಸಂಖ್ಯೆ ಕುರಿತು

112 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಜೀರದ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊರ ರಾಜ್ಯಗಳಲ್ಲಿರುವ ಕನ್ನಡ ಶಾಲೆಗಳ ಸಂಖ್ಯೆ ಎಷ್ಟು? (ಈ ಬಗ್ಗೆ ಪೂರ್ಣ ವಿವರಗಳನ್ನು ನೀಡುವುದು) ?

ಆ) ಆ ಶಾಲೆಗಳ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳೇನು?

ಇ) ಈ ಶಾಲೆಗಳ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರವು ಅನುದಾನವನ್ನೇನಾದರೂ ಬಿಡುಗಡೆ ಮಾಡಿದೆಯೇ?

ಈ) ಬಿಡುಗಡೆ ಮಾಡಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಎಷ್ಟೆಷ್ಟು ಅನುದಾನವನ್ನು ಬಿಡುಗಡೆ ಮಾಡಿದೆ. (ರಾಜ್ಯವಾರು ಅಂಕಿ-ಅಂಶಗಳನ್ನು ನೀಡುವುದು) ?

ಉ) ಆ ಶಾಲೆಗಳ ಸ್ಥಿತಿಗತಿಗಳ ಬಗ್ಗೆ ತನಿಖೆ ನಡೆಸಲು ಶಿಕ್ಷಣ ಇಲಾಖೆಯ ಅಧಿಕಾರಿಗಳು ಎಷ್ಟೆಷ್ಟು ಭಾರಿ ಆ ಶಾಲೆಗಳಿಗೆ ಭೇಟಿ ನೀಡಿದ್ದಾರೆ?

ಊ) ಹೊರ ರಾಜ್ಯಗಳಲ್ಲಿ ವಾಸ ಮಾಡುತ್ತಿರುವ ಕನ್ನಡಿಗರ ಮಕ್ಕಳ ಅನುಕೂಲಕ್ಕಾಗಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಶಾಲೆಗಳನ್ನು ಪ್ರಾರಂಭಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳಾವುವು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಹೊರ ರಾಜ್ಯಗಳಲ್ಲಿರುವ ಕನ್ನಡ ಶಾಲೆಗಳು ಈ ರಾಜ್ಯ ಸರ್ಕಾರದ ಆಡಳಿತ ವ್ಯಾಪ್ತಿಗೆ ಬರದೇ ಇರುವುದರಿಂದ ಇವುಗಳ ಬಗ್ಗೆ ಸರ್ಕಾರದಲ್ಲಿ ಮಾಹಿತಿ ಲಭ್ಯವಿಲ್ಲ. ಆದಾಗ್ಯೂ ಕೆಲವು ಸಂಘ ಸಂಸ್ಥೆಗಳು ಹೊರ ರಾಜ್ಯಗಳಲ್ಲಿ ಶಾಲಾ ಕಾಲೇಜುಗಳನ್ನು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಮತ್ತು ಇ) ಹೊರನಾಡ ಕನ್ನಡ ಶಾಲೆಗಳ ಅಭಿವೃದ್ಧಿಗಾಗಿ ಶಿಕ್ಷಣ ಇಲಾಖೆಯು ಯಾವುದೇ ನಿರ್ದಿಷ್ಟ ಕಾರ್ಯಕ್ರಮ ರೂಪಿಸಿಲ್ಲ.

ಈ) ಉದ್ಭವಿಸುವುದಿಲ್ಲ

ಉ) ನಿಯಾಮಾವಳಿಗಳ ಪ್ರಕಾರ ಭೇಟಿ ನೀಡಲು ಅವಕಾಶವಿರುವುದಿಲ್ಲ

ಊ) ಈ ಬಗ್ಗೆ ಸರ್ಕಾರವು ಯಾವ ನಿರ್ದಿಷ್ಟ ಕಾರ್ಯಕ್ರಮಗಳನ್ನು ಹಾಕಿಕೊಂಡಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸನ್ಮಾನ್ಯ ಅಧ್ಯಕ್ಷರೇ, ಹೊರ ರಾಜ್ಯಗಳಲ್ಲಿರುವ ಕನ್ನಡ ಶಾಲೆಗಳ ಸಂಖ್ಯೆ ಎಷ್ಟು ಎಂದು ಪ್ರಶ್ನೆ ಕೇಳಿದ್ದಕ್ಕೆ ಉತ್ತರವಾಗಿ ಸರ್ಕಾರದಲ್ಲಿ ಅದರ ಬಗ್ಗೆ ಮಾಹಿತಿ ಇಲ್ಲವೆಂದು ಹೇಳಿದ್ದಾರೆ. ಅನಂತರ, ಹೊರ ರಾಜ್ಯಗಳಲ್ಲಿ ಶಾಲಾ-ಕಾಲೇಜುಗಳನ್ನು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಆ ಶಾಲೆಗಳ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳೇನು ಎಂದು ಕೇಳಿದ್ದಕ್ಕೆ ಹೊರನಾಡ ಕನ್ನಡ ಶಾಲೆಗಳ ಅಭಿವೃದ್ಧಿಗಾಗಿ ಶಿಕ್ಷಣ ಇಲಾಖೆಯು ಯಾವುದೇ ನಿರ್ದಿಷ್ಟ ಕಾರ್ಯಕ್ರಮಗಳನ್ನು ರೂಪಿಸಿಲ್ಲವೆಂದು ಉತ್ತರಿಸಿದ್ದಾರೆ. ಇವರಿಗೆ ಕನ್ನಡದ ಬಗ್ಗೆ ಎಷ್ಟು ಅಭಿಮಾನ, ಪ್ರೀತಿ ಇದೆಯೆಂಬುದು ಇಲ್ಲಿ ಗೊತ್ತಾಗುತ್ತದೆ. ನನಗೆ ಗೊತ್ತಿರುವ ಪ್ರಕಾರ ಹೊರ ರಾಜ್ಯಗಳಲ್ಲಿ ಅಂದರೆ, ದೆಹಲಿಯಲ್ಲಿ ಕನ್ನಡ ಸಂಘ ಇದೆ, ಆ ಸಂಘಕ್ಕೆ ಬೇಕಾದಷ್ಟು ಹಣ ಕೊಟ್ಟಿದ್ದಾರೆ. ಮದರಾಸಿನಲ್ಲಿ ಐನಾವರ ಎಂದು ಒಂದು ಕನ್ನಡ ಸಂಘ ಇದೆ, ಅದಕ್ಕೂ ಹಣ ಕೊಟ್ಟಿದ್ದಾರೆ. ಅನಂತರ

ಮಹಾರಾಷ್ಟ್ರದಲ್ಲಿರುವ ಹುದಗೀರ್ ಮತ್ತು ಉದಯಗಿರಿ ಕಾಲೇಜಿಗೆ ಶ್ರೀ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದಾಗ ಐವತ್ತು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಸರ್ಕಾರದಲ್ಲಿ ಯಾವುದೇ ಮಾಹಿತಿ ಇರುವುದಿಲ್ಲವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರಲ್ಲಾ ಇದೇನೆಂದು ನನಗರ್ಥವಾಗುವುದಿಲ್ಲ. ಕನ್ನಡದ ಬಗ್ಗೆ ಇವರಿಗೆ ಅಭಿಮಾನ ಇದೆಯೇ? ಯಾವ್ಯಾವ ಶಾಲೆಗಳಿಗೆ, ಸಂಘ-ಸಂಸ್ಥೆಗಳಿಗೆ ಹಣ ಕೊಡಲಾಗಿದೆ ಎಂಬುದರ ಬಗ್ಗೆ ಮಾಹಿತಿ ನಿಮ್ಮಲ್ಲಿ ಏಕಿರುವುದಿಲ್ಲ? ಹೊರ ರಾಜ್ಯದಲ್ಲಿ ಎಷ್ಟು ಕನ್ನಡ ಶಾಲೆಗಳಿವೆ ಎಂಬುದು ಹೇಗೆ ಗೊತ್ತಾಗುವುದಿಲ್ಲ? ಕೆಲವು ಸಂಘ-ಸಂಸ್ಥೆಗಳಿಗೆ ಹಣವನ್ನು ಒದಗಿಸಿದ್ದು ಅವರು ಶಾಲೆಗಳನ್ನು ನಡೆಸುತ್ತಿದ್ದಾರೆ. ಅಂದ ಮೇಲೆ ನಿಮ್ಮಲ್ಲಿ ಅದರ ಬಗ್ಗೆ ಮಾಹಿತಿ ಇಲ್ಲದೆ, ಯಾವುದೇ ನಿರ್ದಿಷ್ಟ ಕಾರ್ಯಕ್ರಮಗಳನ್ನು ರೂಪಿಸಿಲ್ಲವೆಂದು ಉತ್ತರ ಕೊಟ್ಟರೆ ಏನರ್ಥ? ಮಾನ್ಯ ಸಚಿವರು ಇದರ ಬಗ್ಗೆ ಏನಾದರೂ ಕಾರ್ಯಕ್ರಮ ಹಾಕಿಕೊಂಡಿದ್ದೀರಾ? ಅಥವಾ ಕೈಬಿಟ್ಟಿದ್ದೀರಾ? ಹೊರ ರಾಜ್ಯಗಳಲ್ಲಿರತಕ್ಕ ಕನ್ನಡಿಗರ ಪಾಡು ದೇವರ ಪಾಡಾಗಿದೆ. ಆದುದರಿಂದ, ಇದರ ಬಗ್ಗೆ ಸಚಿವರು ನಿರ್ದಿಷ್ಟವಾಗಿ ಉತ್ತರ ಹೇಳಬೇಕು.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ: ಮಾನ್ಯ ಅಧ್ಯಕ್ಷರೆ, ಹೊರ ರಾಜ್ಯಗಳಲ್ಲಿರತಕ್ಕ ಕನ್ನಡ ಸಂಘ-ಸಂಸ್ಥೆಗಳಿಗೆ ಅದರಲ್ಲೂ ಕೆಲವು ಶಾಲಾ-ಕಾಲೇಜುಗಳಲ್ಲಿ ನಡೆಸತಕ್ಕಂಥ ಸಾಂಸ್ಕೃತಿಕ ಚಟುವಟಿಕೆಗಳಿಗೆ ಮಾತ್ರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಧನ ಸಹಾಯ ನೀಡಲಾಗುತ್ತಿದೆ. ಧನಸಹಾಯ ಪಡೆದುಕೊಳ್ಳುತ್ತಿರುವ ಶಾಲಾ-ಕಾಲೇಜುಗಳ ಪಟ್ಟಿ ನನ್ನ ಹತ್ತಿರ ಇದೆ. ತಮಗೆ ಬೇಕೆಂದರೆ ಅದನ್ನು ಕಳುಹಿಸಿಕೊಡುತ್ತೇನೆ. ಆದರೆ, ಹೊರ ರಾಜ್ಯಗಳಲ್ಲಿ ನಡೆಸತಕ್ಕಂಥ ಶಾಲೆ ಅಥವಾ ಕಾಲೇಜುಗಳ ಅಭಿವೃದ್ಧಿಗಾಗಿ ಪ್ರತ್ಯೇಕ ಕಾರ್ಯಕ್ರಮ ನಮ್ಮ ಇಲಾಖೆಯಲ್ಲಿಲ್ಲ. ಮತ್ತು ಹೊರ ರಾಜ್ಯಗಳಲ್ಲಿರುವ ಕನ್ನಡ ಶಾಲಾ-ಕಾಲೇಜುಗಳ ಸಂಖ್ಯೆ ಎಷ್ಟು ಯಾವ್ಯಾವ ಶಾಲಾ-ಕಾಲೇಜುಗಳಿಗೆ ಎಷ್ಟೆಷ್ಟು ಅನುದಾನ ಕೊಡಲಾಗಿದೆ ಎಂಬ ಬಗ್ಗೆ ಮಾನ್ಯ ಸದಸ್ಯರು ಏನು ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ಉತ್ತರವೇನೆಂದರೆ, ಹೊರ ರಾಜ್ಯಗಳಲ್ಲಿ ಬಹಳಷ್ಟು ಕನ್ನಡ ಶಾಲಾ-ಕಾಲೇಜುಗಳು ನಡೆಯುತ್ತಿದ್ದು, ಅವುಗಳು ನಮ್ಮ ಕರ್ನಾಟಕ ಸರ್ಕಾರದ ವ್ಯಾಪ್ತಿಗೆ ಬರದಿರುವುದರಿಂದ ನಮ್ಮ ಅಧಿಕಾರಿಗಳು ಅಲ್ಲಿಗೆ ಹೋಗಿ ಭೇಟಿ ನೀಡುವುದಕ್ಕಾಗಲಿ, ತನಿಖೆ ನಡೆಸುವುದಕ್ಕಾಗಲಿ ನಿಯಮಾವಳಿ ಪ್ರಕಾರ ಅವಕಾಶವಿರುವುದಿಲ್ಲ. ಆ ಶಾಲೆಗಳೆಲ್ಲವೂ ಆಯಾ ರಾಜ್ಯದ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟದ್ದಾಗಿರುತ್ತವೆ. ಹೊರ ರಾಜ್ಯಗಳಲ್ಲಿ ಕನ್ನಡ ಶಾಲಾ-ಕಾಲೇಜುಗಳಿರುವುದು ಬಹಳ ವಿರಳ. ಆದುದರಿಂದ, ನಾವು ಆ ಶಾಲಾ-ಕಾಲೇಜುಗಳಿಗೆ ಹೆಚ್ಚಿನ ಅನುದಾನ ಕೊಡುವುದಕ್ಕಾಗುವುದಿಲ್ಲ. ಏನಿದ್ದರೂ ಶಾಲಾ-ಕಾಲೇಜುಗಳ ಕಟ್ಟಡ ಕೆಲಸಕ್ಕೆಂದು ಅವರು ಕೇಳಿದಾಗ ನಾವು ಹಣವನ್ನು ಬಿಡುಗಡೆ ಮಾಡಬಹುದು. ಈಗಾಗಲೇ ಈ ಹಿಂದೆ ನಮ್ಮ ಸರ್ಕಾರದಿಂದ ಬಾಂಬೆ ಮತ್ತು ದೆಹಲಿಯಲ್ಲಿರುವ ಕನ್ನಡ ಸಂಘ-ಸಂಸ್ಥೆಗಳಿಗೆ ಆರು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಮತ್ತು ಇದೇ ರೀತಿ ಕೆಲವಾರು ಸಂಘ-ಸಂಸ್ಥೆಗಳಿಗೆ ಕಟ್ಟಡ ಕಟ್ಟುವುದಕ್ಕೆಂದು ನಾವು ಹಣವನ್ನು ಬಿಡುಗಡೆ ಮಾಡಿದ್ದೇವೆಯೇ ಹೊರತು ಅನುದಾನದ ರೀತಿಯಲ್ಲಿ ಯಾವುದೇ ಹಣವನ್ನು ಬಿಡುಗಡೆ ಮಾಡಿಲ್ಲ.

ಶ್ರೀ ವಾಟಾಳ್ ನಾಗರಾಜ್: ಕಾಸರಗೋಡಿನಲ್ಲಿ ಕನ್ನಡ ಶಾಲೆಗಳನ್ನು ಮುಚ್ಚುತ್ತಿದ್ದಾರೆ, ಗಡಿ ಪ್ರದೇಶದಲ್ಲಿ ಕನ್ನಡ ಶಾಲೆಗಳನ್ನು ಮುಚ್ಚುತ್ತಿದ್ದಾರೆ. ಕರ್ನಾಟಕದಲ್ಲಿ ಮಾತ್ರ ಎಲ್ಲಾ ಭಾಷೆಯ ಶಾಲೆಗಳಿಗೆ ಎಲ್ಲಾ ರೀತಿಯ ಸಹಾಯ, ಸೌಲಭ್ಯ, ಜಮೀನು, ನೀರಿನ ಸೌಕರ್ಯ, ವಗೈರೆ ಕೊಡುತ್ತಿದ್ದೀರಿ. ಆದರೆ, ಹೊರ ರಾಜ್ಯದಲ್ಲಿರುವಂಥ ಕನ್ನಡ ಶಾಲೆಗಳ ಬಗ್ಗೆ ಜಾಗ್ರತೆ ವಹಿಸಿ ಅವುಗಳಿಗೆ ಅನುದಾನ ನೀಡಬೇಕೇ ಅಥವಾ ಬೇಡವೇ? ಅಲ್ಲಿನ ಕನ್ನಡ ಶಾಲಾ-ಕಾಲೇಜುಗಳ ಪರಿಸ್ಥಿತಿ ಏನೆಂಬುದರ ಅಂಕಿ-ಅಂಶ

ಮಹಾರಾಷ್ಟ್ರದಲ್ಲಿರುವ ಹುದಗೀರ್ ಮತ್ತು ಉದಯಗಿರಿ ಕಾಲೇಜಿಗೆ ಶ್ರೀ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದಾಗ ಐವತ್ತು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಸರ್ಕಾರದಲ್ಲಿ ಯಾವುದೇ ಮಾಹಿತಿ ಇರುವುದಿಲ್ಲವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರಲ್ಲಾ ಇದೇನೆಂದು ನನಗರ್ಥವಾಗುವುದಿಲ್ಲ. ಕನ್ನಡದ ಬಗ್ಗೆ ಇವರಿಗೆ ಅಭಿಮಾನ ಇದೆಯೇ? ಯಾವ್ಯಾವ ಶಾಲೆಗಳಿಗೆ, ಸಂಘ-ಸಂಸ್ಥೆಗಳಿಗೆ ಹಣ ಕೊಡಲಾಗಿದೆ ಎಂಬುದರ ಬಗ್ಗೆ ಮಾಹಿತಿ ನಿಮ್ಮಲ್ಲಿ ಏಕಿರುವುದಿಲ್ಲ? ಹೊರ ರಾಜ್ಯದಲ್ಲಿ ಎಷ್ಟು ಕನ್ನಡ ಶಾಲೆಗಳಿವೆ ಎಂಬುದು ಹೇಗೆ ಗೊತ್ತಾಗುವುದಿಲ್ಲ? ಕೆಲವು ಸಂಘ-ಸಂಸ್ಥೆಗಳಿಗೆ ಹಣವನ್ನು ಒದಗಿಸಿದ್ದು ಅವರು ಶಾಲೆಗಳನ್ನು ನಡೆಸುತ್ತಿದ್ದಾರೆ. ಅಂದ ಮೇಲೆ ನಿಮ್ಮಲ್ಲಿ ಅದರ ಬಗ್ಗೆ ಮಾಹಿತಿ ಇಲ್ಲದೆ, ಯಾವುದೇ ನಿರ್ದಿಷ್ಟ ಕಾರ್ಯಕ್ರಮಗಳನ್ನು ರೂಪಿಸಿಲ್ಲವೆಂದು ಉತ್ತರ ಕೊಟ್ಟರೆ ಏನರ್ಥ? ಮಾನ್ಯ ಸಚಿವರು ಇದರ ಬಗ್ಗೆ ಏನಾದರೂ ಕಾರ್ಯಕ್ರಮ ಹಾಕಿಕೊಂಡಿದ್ದೀರಾ? ಅಥವಾ ಕೈಬಿಟ್ಟಿದ್ದೀರಾ? ಹೊರ ರಾಜ್ಯಗಳಲ್ಲಿರತಕ್ಕ ಕನ್ನಡಿಗರ ಪಾಡು ದೇವರ ಪಾಡಾಗಿದೆ. ಆದುದರಿಂದ, ಇದರ ಬಗ್ಗೆ ಸಚಿವರು ನಿರ್ದಿಷ್ಟವಾಗಿ ಉತ್ತರ ಹೇಳಬೇಕು.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ: ಮಾನ್ಯ ಅಧ್ಯಕ್ಷರೆ, ಹೊರ ರಾಜ್ಯಗಳಲ್ಲಿರತಕ್ಕ ಕನ್ನಡ ಸಂಘ-ಸಂಸ್ಥೆಗಳಿಗೆ ಅದರಲ್ಲೂ ಕೆಲವು ಶಾಲಾ-ಕಾಲೇಜುಗಳಲ್ಲಿ ನಡೆಸತಕ್ಕಂಥ ಸಾಂಸ್ಕೃತಿಕ ಚಟುವಟಿಕೆಗಳಿಗೆ ಮಾತ್ರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಧನ ಸಹಾಯ ನೀಡಲಾಗುತ್ತಿದೆ. ಧನಸಹಾಯ ಪಡೆದುಕೊಳ್ಳುತ್ತಿರುವ ಶಾಲಾ-ಕಾಲೇಜುಗಳ ಪಟ್ಟಿ ನನ್ನ ಹತ್ತಿರ ಇದೆ. ತಮಗೆ ಬೇಕೆಂದರೆ ಅದನ್ನು ಕಳುಹಿಸಿಕೊಡುತ್ತೇನೆ. ಆದರೆ, ಹೊರ ರಾಜ್ಯಗಳಲ್ಲಿ ನಡೆಸತಕ್ಕಂಥ ಶಾಲೆ ಅಥವಾ ಕಾಲೇಜುಗಳ ಅಭಿವೃದ್ಧಿಗಾಗಿ ಪ್ರತ್ಯೇಕ ಕಾರ್ಯಕ್ರಮ ನಮ್ಮ ಇಲಾಖೆಯಲ್ಲಿಲ್ಲ. ಮತ್ತು ಹೊರ ರಾಜ್ಯಗಳಲ್ಲಿರುವ ಕನ್ನಡ ಶಾಲಾ-ಕಾಲೇಜುಗಳ ಸಂಖ್ಯೆ ಎಷ್ಟು ಯಾವ್ಯಾವ ಶಾಲಾ-ಕಾಲೇಜುಗಳಿಗೆ ಎಷ್ಟೆಷ್ಟು ಅನುದಾನ ಕೊಡಲಾಗಿದೆ ಎಂಬ ಬಗ್ಗೆ ಮಾನ್ಯ ಸದಸ್ಯರು ಏನು ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ಉತ್ತರವೇನೆಂದರೆ, ಹೊರ ರಾಜ್ಯಗಳಲ್ಲಿ ಬಹಳಷ್ಟು ಕನ್ನಡ ಶಾಲಾ-ಕಾಲೇಜುಗಳು ನಡೆಯುತ್ತಿದ್ದು, ಅವುಗಳು ನಮ್ಮ ಕರ್ನಾಟಕ ಸರ್ಕಾರದ ವ್ಯಾಪ್ತಿಗೆ ಬರದಿರುವುದರಿಂದ ನಮ್ಮ ಅಧಿಕಾರಿಗಳು ಅಲ್ಲಿಗೆ ಹೋಗಿ ಭೇಟಿ ನೀಡುವುದಕ್ಕಾಗಲಿ, ತನಿಖೆ ನಡೆಸುವುದಕ್ಕಾಗಲಿ ನಿಯಮಾವಳಿ ಪ್ರಕಾರ ಅವಕಾಶವಿರುವುದಿಲ್ಲ. ಆ ಶಾಲೆಗಳೆಲ್ಲವೂ ಆಯಾ ರಾಜ್ಯದ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟದ್ದಾಗಿರುತ್ತವೆ. ಹೊರ ರಾಜ್ಯಗಳಲ್ಲಿ ಕನ್ನಡ ಶಾಲಾ-ಕಾಲೇಜುಗಳಿರುವುದು ಬಹಳ ವಿರಳ. ಆದುದರಿಂದ, ನಾವು ಆ ಶಾಲಾ-ಕಾಲೇಜುಗಳಿಗೆ ಹೆಚ್ಚಿನ ಅನುದಾನ ಕೊಡುವುದಕ್ಕಾಗುವುದಿಲ್ಲ. ಏನಿದ್ದರೂ ಶಾಲಾ-ಕಾಲೇಜುಗಳ ಕಟ್ಟಡ ಕೆಲಸಕ್ಕೆಂದು ಅವರು ಕೇಳಿದಾಗ ನಾವು ಹಣವನ್ನು ಬಿಡುಗಡೆ ಮಾಡಬಹುದು. ಈಗಾಗಲೇ ಈ ಹಿಂದೆ ನಮ್ಮ ಸರ್ಕಾರದಿಂದ ಬಾಂಬೆ ಮತ್ತು ದೆಹಲಿಯಲ್ಲಿರುವ ಕನ್ನಡ ಸಂಘ-ಸಂಸ್ಥೆಗಳಿಗೆ ಆರು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಮತ್ತು ಇದೇ ರೀತಿ ಕೆಲವಾರು ಸಂಘ-ಸಂಸ್ಥೆಗಳಿಗೆ ಕಟ್ಟಡ ಕಟ್ಟುವುದಕ್ಕೆಂದು ನಾವು ಹಣವನ್ನು ಬಿಡುಗಡೆ ಮಾಡಿದ್ದೇವೆಯೇ ಹೊರತು ಅನುದಾನದ ರೀತಿಯಲ್ಲಿ ಯಾವುದೇ ಹಣವನ್ನು ಬಿಡುಗಡೆ ಮಾಡಿಲ್ಲ.

ಶ್ರೀ ವಾಟಾಳ್ ನಾಗರಾಜ್: ಕಾಸರಗೋಡಿನಲ್ಲಿ ಕನ್ನಡ ಶಾಲೆಗಳನ್ನು ಮುಚ್ಚುತ್ತಿದ್ದಾರೆ, ಗಡಿ ಪ್ರದೇಶದಲ್ಲಿ ಕನ್ನಡ ಶಾಲೆಗಳನ್ನು ಮುಚ್ಚುತ್ತಿದ್ದಾರೆ. ಕರ್ನಾಟಕದಲ್ಲಿ ಮಾತ್ರ ಎಲ್ಲಾ ಭಾಷೆಯ ಶಾಲೆಗಳಿಗೆ ಎಲ್ಲಾ ರೀತಿಯ ಸಹಾಯ, ಸೌಲಭ್ಯ, ಜಮೀನು, ನೀರಿನ ಸೌಕರ್ಯ, ವಗೈರೆ ಕೊಡುತ್ತಿದ್ದೀರಿ. ಆದರೆ, ಹೊರ ರಾಜ್ಯದಲ್ಲಿರುವಂಥ ಕನ್ನಡ ಶಾಲೆಗಳ ಬಗ್ಗೆ ಜಾಗ್ರತೆ ವಹಿಸಿ ಅವುಗಳಿಗೆ ಅನುದಾನ ನೀಡಬೇಕೇ ಅಥವಾ ಬೇಡವೇ? ಅಲ್ಲಿನ ಕನ್ನಡ ಶಾಲಾ-ಕಾಲೇಜುಗಳ ಪರಿಸ್ಥಿತಿ ಏನೆಂಬುದರ ಅಂಕಿ-ಅಂಶ

ಮಾನ್ಯ ವಾಟಾಳ್ ನಾಗರಾಜ್‌ರವರು ಮಾಹಿತಿಯನ್ನು ಕೊಟ್ಟಿದ್ದಾರೆ. ತಮ್ಮ ಸರ್ಕಾರಕ್ಕೆ ಅದರ ಬಗ್ಗೆ ಆ ಸರ್ಕಾರಗಳಿಂದ ಮಾಹಿತಿಯನ್ನು ತರಿಸಿಕೊಳ್ಳಲು ಏನು ಕಷ್ಟವಿದೆ? ಮಹಾರಾಷ್ಟ್ರ, ಆಂಧ್ರಪ್ರದೇಶ, ಕೇರಳ, ತಮಿಳುನಾಡು ಸರ್ಕಾರದ ಜೊತೆ ತಾವು ಸಂಪರ್ಕ ಸಾಧಿಸಿದರೆ ತಮಗೆ ಮಾಹಿತಿ ಗೊತ್ತಾಗುತ್ತದೆ. ಆ ರಾಜ್ಯಗಳಲ್ಲಿ ನಮ್ಮ ಕನ್ನಡ ಸಂಘಗಳಿವೆ ಅವರ ಜೊತೆ ಸಂಪರ್ಕ ಮಾಡಿದರೆ ತಮಗೆ ಮಾಹಿತಿ ದೊರೆಯುತ್ತದೆ. ಆ ಕೆಲಸವನ್ನು ತಾವು ಮಾಡಬೇಕಾಗುತ್ತದೆ. ಸದಸ್ಯರೇ ಇದರ ಬಗ್ಗೆ ಹೇಳಿ ಎಂದು ಹೇಳಿ ತಾವು ಜಾರಿಕೊಂಡುಹೋದರೆ ಹೇಗೆ? ಆದುದರಿಂದ ಆ ರಾಜ್ಯಗಳಲ್ಲಿರುವ ನಮ್ಮ ಕನ್ನಡ ಸಂಘಗಳ ಜೊತೆ ತಾವು ಸಂಪರ್ಕ ಸಾಧಿಸಿ ಮಾಹಿತಿಯನ್ನು ತರಿಸಿಕೊಳ್ಳಲು ಪ್ರಯತ್ನ ಮಾಡಿ. ನಮ್ಮ ಗಮನಕ್ಕೇನಾದರು ಮಾಹಿತಿ ತಿಳಿದು ಬಂದರೆ ತಮಗೆ ತಿಳಿಸುತ್ತೇವೆ.

(ಗೊಂದಲ)

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ: ಮಾನ್ಯ ಸದಸ್ಯರುಗಳೀನು ಹೊರ ರಾಜ್ಯದಲ್ಲಿ ಇರತಕ್ಕಂಥ ಕನ್ನಡ ಶಾಲೆಗಳ ಬಗ್ಗೆ ನನ್ನ ಗಮನಕ್ಕೆ ತಂದಿದ್ದಾರೆ, ಅದರ ಬಗ್ಗೆ ನಾವು ಆ ರಾಜ್ಯಗಳ ಶಿಕ್ಷಣ ಸಚಿವರುಗಳ ಜೊತೆ ಸಂಪರ್ಕ ಬೆಳೆಸಿ ಈ ಬಗ್ಗೆ ಅವರ ಸಹಾಯ, ಸಹಕಾರ ಮತ್ತು ಕನ್ನಡ ಶಾಲೆಗಳ ಅಸ್ತಿತ್ವದ ಬಗ್ಗೆ ಅವರುಗಳ ಗಮನವನ್ನು ಸೆಳೆದು ಅಲ್ಲಿ ಏನಾದರು ನಮ್ಮ ಕನ್ನಡಿಗರಿಗೆ ತೊಂದರೆಯಾಗಿದ್ದರೆ ಅದನ್ನು ಸರಿಪಡಿಸಲು ಖಂಡಿತವಾಗಿ ಕ್ರಮ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇವೆ. ಇಷ್ಟನ್ನು ಮಾತ್ರ ನಾನು ಹೇಳಬಯಸುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಸನ್ಮಾನ್ಯ ಅಧ್ಯಕ್ಷರೇ, ಅಲ್ಲಿನ ಕನ್ನಡ ಶಾಲೆಗಳನ್ನು ಬರೇ ಸರಿಪಡಿಸುತ್ತೀರೋ ಅವುಗಳು ಬೆಳೆಯಲು ಏನಾದರೂ ಅನುದಾನವನ್ನು ಕೊಡುತ್ತೀರೋ? ಅದೇನು ಪಾಕಿಸ್ತಾನವಲ್ಲ, ಅಮೇರಿಕವಲ್ಲ ನೀವು ಆ ರಾಜ್ಯಗಳಿಗೆ ಮಾಹಿತಿಯನ್ನು ಕೇಳಿದ ತಕ್ಷಣ ಮಾಹಿತಿ ಬರುತ್ತದೆ. ಆ ರೀತಿ ಅವರಿಂದ ಮಾಹಿತಿಯನ್ನು ಕೇಳಿಕೊಂಡಮೇಲೆ ಅವರಿಗೇನಾದರು ಹಣವನ್ನು ಕೊಡುತ್ತೀರ? ಸಹಾಯ ಮಾಡುತ್ತೀರ? ಅಥವಾ ಬರಿ ಬಾಯಿ ಮಾತಿನಲ್ಲಿ ಹೇಳುತ್ತೀರಾ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ: ನಮ್ಮ ರಾಜ್ಯವನ್ನು ಬಿಟ್ಟು ಬೇರೆ ರಾಜ್ಯದಲ್ಲಿರುವ ಶಾಲೆಗಳಿಗೆ ಅನುದಾನವನ್ನು ಕೊಡುವುದು ಆ ರಾಜ್ಯದ ಕರ್ತವ್ಯ. ಆದರೂ ಸಹ ಅವರ ಹತ್ತಿರ ಈ ಬಗ್ಗೆ ಮಾತನಾಡೋಣ. ನಮ್ಮ ರಾಜ್ಯದಲ್ಲಿರತಕ್ಕ ಬೇರೆ ಭಾಷೆಯ ಶಾಲೆಗಳಿಗೆ ನಾವು ಹೇಗೆ ಅನುದಾನವನ್ನು ಕೊಡುತ್ತೇವೆಯೋ ಅದೇ ರೀತಿ ಅವರೂ ಸಹ ಪ್ರೋತ್ಸಾಹ ಧನವನ್ನು ಕೊಡಬೇಕು ಎನ್ನುವುದನ್ನು ಅವರ ಗಮನಕ್ಕೆ ತರೋಣ. ಮತ್ತು ಆ ಶಾಲೆಗಳ ಅಭಿವೃದ್ಧಿ ಬಗ್ಗೆ ಅಲ್ಲಿನ ಸರ್ಕಾರವೂ ಸಹ ಅಷ್ಟೇ ಕಳಕಳಿಯನ್ನು ಹೊಂದಿರಬೇಕು ಎನ್ನುವುದನ್ನು ನಾನು ಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ ಆ ರಾಜ್ಯಗಳ ಶಿಕ್ಷಣ ಸಚಿವರುಗಳ ಜೊತೆ ಮಾತನಾಡಿ ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಅವರು ಅನುದಾನವನ್ನು ಕೊಡದಿದ್ದರೆ ಆ ಶಾಲೆಗಳನ್ನು ಮುಚ್ಚಿಬಿಡುತ್ತೀರಾ?

(ಉತ್ತರವಿಲ್ಲ)

ಅರಣ್ಯ ಇಲಾಖೆಯಿಂದ ಮರಗಳನ್ನು ಕಡಿಯುವಿಕೆ ಬಗ್ಗೆ ಆಜ್ಞೆ

110 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?